## ಕರ್ನಾಟಕ ಸರ್ಕಾರ

ಸಂಖ್ಯೆ:ಸಕನಿ/ಮಾಹಕಾ/ಸಿಆರ್ 114/05-06

ಸಮಾಜ ಕಲ್ಯಾಣ ಆಯುಕ್ತರ ಕಛೇರಿ,
5ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ 06-02-2016

## ಅಧಿಸೂಚನೆ

2005ರ ಮಾಹಿತಿ ಹಕ್ಕು ಕಾಯಿದೆ ಕಲಂ 5(1), 5(2) ಮತ್ತು 19(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 24-08-2006 ರಲ್ಲಿ ಹೊರಡಿಸಿದ ಅಧಿಸೂಚನೆಯನ್ನು ಮಾರ್ಪಡಿಸಿ, ಸಮಾಜ ಕಲ್ಯಾಣ ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನೇಮಿಸಲಾಗಿತ್ತು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಧಿಕಾರಿಗಳು ನಿವೃತ್ತಿ/ವರ್ಗಾವಣೆಯಾಗಿರುವುದರಿಂದ ಹಾಗೂ ಇತರೆ ಆಡಳಿತಾತ್ಮಕ ಕಾರಣಗಳಿಂದ ಸದರಿ ಆದೇಶವನ್ನು ಮಾರ್ಪಡಿಸಿ, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತಾಲಯದ ಈ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಮೇಲ್ಮನವಿ ಪ್ರಾಧಿಕಾರಿಗಳಾಗಿ ಗುರುತಿಸಿ ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಈ ಆದೇಶದಂತೆ ಮಾಹಿತಿ ಹಕ್ಕು ಅಧಿಕಾರಿಗಳು 2005ರ ಸೆಕ್ಷನ್ 6(1) ಹಾಗೂ 7(1) ರನ್ವಯ ಕೋರಲಾದ ಮಾಹಿತಿಯನ್ನು (ಸೆಕ್ಷನ್ 8 ಮತ್ತು 9 ರಲ್ಲಿ ವಿನಾಯಿತಿ ನೀಡಿರುವ ಮಾಹಿತಿಯನ್ನು ಹೊರತುಪಡಿಸಿ) ಸಕಾಲದಲ್ಲಿ ಅರ್ಜಿದಾರರಿಗೆ ಮಾಹಿತಿಯನ್ನು ಒದಗಿಸುವುದು ಹಾಗೂ ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ವರದಿಗಳನ್ನು ಸರ್ಕಾರ ಹಾಗೂ ಕರ್ನಾಟಕ ಮಾಹಿತಿ ಆಯೋಗಕ್ಕೆ ಸಲ್ಲಿಸಲು ಈ ಅಧಿಕಾರಿಗಳು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರಿಗೆ ನೆರವು ನೀಡುವುದು.

### ರಾಜ್ಯ ಮಟ್ಟದಲ್ಲಿ ಆಯುಕ್ತರ ಕಛೇರಿ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಈ ಕಛೇರಿಯ ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಕಲಂ 5(1) ಮತ್ತು 5(2) ರಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರಗಳು

| ಕ್ರಸ | ವಿವರ | ಕರ್ತವ್ಯಗಳು | ದೂರವಾಣಿ ಸಂಖ್ಯೆ |
|---|---|---|---|
| 1 | ಡಾ: ಹೆಚ್.ನಟರಾಜ್,<br>ಉಪ ನಿರ್ದೇಶಕರು (ಆಡಳಿತ)<br>**ಸಾರ್ವಜನಿಕ ಮಾಹಿತಿ ಅಧಿಕಾರಿ**<br>**ಸಹಾಯಕ ಮಾಹಿತಿ ಅಧಿಕಾರಿಗಳು**<br>1. ಶ್ರೀಮತಿ ನೀಲಮ್ಮ.ಜಿ.ಶಹಪುರ ಕಛೇರಿಅಧೀಕ್ಷಕರು (ಸಿಬ್ಬಂದಿ)<br>2. ಶ್ರೀ ಶಿವಸ್ವಾಮಿ, ಕಛೇರಿ ಅಧೀಕ್ಷಕರು(ಸಿಬ್ಬಂದಿ)<br>3. ಶ್ರೀಮತಿ ರೇವತಿ ಕಛೇರಿ ಅಧೀಕ್ಷಕರು | ಸಿಬ್ಬಂದಿ ಮತ್ತು ಆಡಳಿತ ಹಾಗೂ ಉಗ್ರಾಣ ಶಾಖೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಅನುಷ್ಠಾನ<br><br><br><br>- " -<br>- " - | 080 22250597<br><br><br><br>080 22250597<br>080 22250597 |

| | | | |
|---|---|---|---|
| 2 | ಡಾ. ಹೆಚ್.ನಟರಾಜ್<br>ಉಪ ನಿರ್ದೇಶಕರು<br>(ಉ ಮತ್ತು ತ)ಪ್ರಭಾರ<br>**ಸಾರ್ವಜನಿಕ ಮಾಹಿತಿ ಅಧಿಕಾರಿ**<br><br>**ಸಹಾಯಕ ಮಾಹಿತಿ ಅಧಿಕಾರಿಗಳು**<br><br>ಶ್ರೀಮತಿ ಮೀನಾಕ್ಷಿ<br>ತನಿಖಾ ಸಹಾಯಕರು<br>ಉದ್ಯೋಗ ಮತ್ತು ತರಬೇತಿ<br>ಶಾಖೆ | ಉದ್ಯೋಗ ಮತ್ತು ತರಬೇತಿ ಶಾಖೆಗೆ ಸಂಬಂಧಪಟ್ಟ ವಿಷಯಗಳು<br><br><br><br><br><br>– " – | 080 22353760<br><br><br><br><br><br>080 22353760 |
| 3 | ಶ್ರೀಪಿ.ನಾಗೇಶ್.<br>ಜಂಟಿನಿರ್ದೇಶಕರು<br>(ಶಿಕ್ಷಣ)(ಮೂಲಭೂತಸೌಕರ್ಯ)<br>ಪ್ರಭಾರ,**ಸಾರ್ವಜನಿಕಮಾಹಿತಿ ಅಧಿಕಾರಿ**<br><br>**ಸಹಾಯಕ ಮಾಹಿತಿ ಅಧಿಕಾರಿಗಳು**<br>1. ಶ್ರೀಮತಿ ಉಷಾದೇವಿ.<br>ಕಛೇರಿ ಅಧೀಕ್ಷಕರು (ಶಿಕ್ಷಣ)<br>2. ಶ್ರೀ ಎ. ಶ್ರೀನಿವಾಸ<br>ಕಛೇರಿಅಧೀಕ್ಷಕರು<br>(ಮೂಲಭೂತಸೌಕರ್ಯ)<br>3. ಶ್ರೀ ಮಧುಸೂದನ್<br>ಕಛೇರಿ ಅಧೀಕ್ಷಕರು (ಶಿಕ್ಷಣ) | ಶಿಕ್ಷಣ ಶಾಖೆಗೆ ಸಂಬಂಧಪಟ್ಟಂತೆ ಹಾಗೂ ಪ.ಜಾತಿ ಕಾಲೊನಿಗಳಿಗೆ ಮೂಲಭೂತ ಸೌಕರ್ಯ ಹಾಗೂ ಇತರೆ ವಿಷಯಗಳಿಗೆ ಸಂಬಂಧ ಪಟ್ಟಂತೆ<br><br><br>– " –<br><br>– " – | 080 22353762<br><br><br><br><br><br><br>080 22254071<br><br>080 22254071 |
| 4 | ಶ್ರೀ ಅರುಣ್ ಫುರ್ಟಾಡೋ<br>ಉಪ ನಿರ್ದೇಶಕರು (ಪ.ಜಾ.ಉ.ಯೋ)<br>**ಸಾರ್ವಜನಿಕ ಮಾಹಿತಿ ಅಧಿಕಾರಿ**<br><br>**ಸಹಾಯಕ ಮಾಹಿತಿ ಅಧಿಕಾರಿ**<br><br>1.ಕಛೇರಿ ಅಧೀಕ್ಷಕರು(ಪ.ಜಾ.ಉ.ಯೋ) | ಪ.ಜಾ.ಉ.ಯೋ. ಶಾಖೆಗೆ ಸಂಬಂಧ ಪಟ್ಟಂತೆ<br><br><br><br><br><br>– " – | 080 22350963<br><br><br><br><br><br>080 22350963 |
| 5 | ಶ್ರೀಮತಿ ಸುಮಯ್ಯ ರೂಹಿ<br>ಉಪ ನಿರ್ದೇಶಕರು (ಸಮನ್ವಯ)<br>**ಸಾರ್ವಜನಿಕ ಮಾಹಿತಿ ಅಧಿಕಾರಿ**<br><br>**ಸಹಾಯಕ ಮಾಹಿತಿ ಅಧಿಕಾರಿ**<br>ಶ್ರೀಮತಿ ಚಾಮುಂಡಮ್ಮ<br>ಕಛೇರಿ ಅಧೀಕ್ಷಕರು(ಸಮನ್ವಯ) | ಸಮನ್ವಯ ಶಾಖೆಗೆ ಸಂಬಂಧಪಟ್ಟಂತೆ<br><br><br><br><br>– " – | 080 22353762 |

| | | | |
|---|---|---|---|
| 6 | ಶ್ರೀ ಮಂಜುನಾಥ ಸ್ವಾಮಿ,<br>ಮುಖ್ಯ ಲೆಕ್ಕಾಧಿಕಾರಿಗಳು<br>**ಸಾರ್ವಜನಿಕ ಮಾಹಿತಿ ಅಧಿಕಾರಿ**<br>**ಸಹಾಯಕ ಮಾಹಿತಿ ಅಧಿಕಾರಿಗಳು**<br>1. ರಾಮಚಂದ್ರಯ್ಯ,<br>ಕಛೇರಿಅಧೀಕ್ಷಕರು (ಲೆಕ್ಕಶಾಖೆ)<br>2. ಶಶಿಕಲಾ<br>ಕಛೇರಿ ಅಧೀಕ್ಷಕರು(ಲೆಕ್ಕಶಾಖೆ) | ಲೆಕ್ಕಶಾಖೆ ಮತ್ತು ಅಂಕಿಅಂಶಗಳಿಗೆ ಸಂಬಂಧಪಟ್ಟಂತೆ<br><br><br><br>- " -<br><br>- " - | 9480843229 |
| 7 | ಸಹಾಯಕ ನಿರ್ದೇಶಕರು<br>(ಅಂಕಿ ಅಂಶ)<br>**ಸಾರ್ವಜನಿಕ ಮಾಹಿತಿ ಅಧಿಕಾರಿ**<br>**ಸಹಾಯಕ ಮಾಹಿತಿ ಅಧಿಕಾರಿ**<br>ಶ್ರೀಮತಿ ಅಚಲಾಭಾರ್ಗವಿ,<br>ಕಛೇರಿ ಅಧೀಕ್ಷಕರು<br>(ಅಂಕಿ ಅಂಶ ಶಾಖೆ) | ಅಂಕಿ ಅಂಶ ಶಾಖೆಗೆ ಸಂಬಂಧಪಟ್ಟ ವಿಷಯಗಳು<br><br><br>- " - | 080 22353761<br><br><br>080 22353761 |

## ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ ಮೇಲ್ಮನವಿ ಪ್ರಾಧಿಕಾರ

2005ರ ಮಾಹಿತಿ ಹಕ್ಕು ಕಾಯ್ದೆ ಸೆಕ್ಷನ್ 19(1)ರ ಅಡಿಯಲ್ಲಿ ದಾಖಲಾಗಿರುವ ಮೇಲ್ಮನವಿಯನ್ನು ಇತ್ಯರ್ಥಪಡಿಸಲು ಈ ಕೆಳಕಂಡ ಅಧಿಕಾರಿಗಳು ಸದರಿ ಅಧಿನಿಯಮದಡಿ **"ಮೊದಲನೇ ಮೇಲ್ಮನವಿ ಪ್ರಾಧಿಕಾರ"**

| ಕ್ರಸಂ | ವಿವರ | ಕರ್ತವ್ಯಗಳು | ದೂರವಾಣಿ ಸಂಖ್ಯೆ |
|---|---|---|---|
| 1 | ಶ್ರೀ ಎನ್.ಬಿ.ಬಳಿಗಾರ್,<br>ಅಪರ ನಿರ್ದೇಶಕರು (ಅಭಿವೃದ್ಧಿ)<br>ಮೇಲ್ಮನವಿ ಪ್ರಾಧಿಕಾರ | ಶಿಕ್ಷಣ ಹಾಗೂ ಪ.ಜಾತಿ ಕಾಲೊನಿಗಳಿಗೆ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ | 080 22254071 |
| 2 | ಡಿಗ್ಗೆ ಶಿವಾಜಿ, ಜಂಟಿ ನಿರ್ದೇಶಕರು, (ಆಡಳಿತ) | ಸಿಬ್ಬಂದಿ ಮತ್ತು ಆಡಳಿತ | 080 22353758 |
| 3 | ಡಾ: ಎಂ.ಸಿ. ಶ್ರೀನಿವಾಸ<br>ಜಂಟಿ ನಿರ್ದೇಶಕರು (ಮೀಸಲಾತಿ ಜಾರಿ ಕೋಶ)<br>ಮೇಲ್ಮನವಿ ಪ್ರಾಧಿಕಾರ | ಉದ್ಯೋಗ ಮತ್ತು ತರಬೇತಿ ಹಾಗೂ ಲೆಕ್ಕಪತ್ರ ಶಾಖೆಗಳಿಗೆ ಸಂಬಂಧಪಟ್ಟಂತೆ | 080 22353760 |
| 4 | ಡಾ: ವಿ. ಸೌಂದರ್‌ರಾಜ್<br>ಜಂಟಿನಿರ್ದೇಶಕರು(ಪ.ಜಾ.ಉ.ಯೋ)<br>ಮೇಲ್ಮನವಿ ಪ್ರಾಧಿಕಾರ | ಪ.ಜಾ.ಉ.ಯೋ/ಸಮನ್ವಯ ಶಾಖೆಗೆ ಸಂಬಂಧಪಟ್ಟಂತೆ | 080 22252623 |

" ಸಾರ್ವಜನಿಕ ಸಂಪರ್ಕಾಧಿಕಾರಿ "

ಶ್ರೀ ಮಂಜುನಾಥ.ಜೆ.ಕೆ. – 080 22253783
ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ.
5ನೇ ಮಹಡಿ,ಬಹುಮಹಡಿಗಳ ಕಟ್ಟಡ.
ಡಾ: ಬಿ.ಆರ್. ಅಂಬೇಡ್ಕರ್ ವೀಧಿ.
ಬೆಂಗಳೂರು.

ಇವರನ್ನು ಮಾಹಿತಿ ಹಕ್ಕು ಕಾಯಿದೆ ಅಡಿ ಆಯುಕ್ತರ ಕಛೇರಿಯಲ್ಲಿ ಸ್ವೀಕರಿಸಲಾಗುವ ಅರ್ಜಿಗಳನ್ನು ವಿಂಗಡಿಸಿ ಸೂಕ್ತ ಕ್ರಮ ವಹಿಸಲು ನೇಮಕ ಮಾಡಲಾಗಿದೆ.

ಸಾರ್ವಜನಿಕರು ಮಾಹಿತಿಗಾಗಿ, ನಮೂನೆ-ಎ ರಲ್ಲಿ ಕಲಂ 6(1) ಹಾಗೂ 7(1) ರ ಅಡಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಿ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಉಪ ನಿರ್ದೇಶಕರು, ಆಡಳಿತ/ಉ ಮತ್ತು ತ/ಶಿಕ್ಷಣ/ಪ.ಜಾ.ಉ.ಯೋ/ಸಮನ್ವಯ ಮತ್ತು ಮುಖ್ಯ ಲೆಕ್ಕಾಧಿಕಾರಿ ಇವರುಗಳ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಅರ್ಜಿಗಳನ್ನು ಕೂಡಲೇ ಬೇರ್ಪಡಿಸಿ, ಸಾರ್ವಜನಿಕ ಸಂಪರ್ಕಾಧಿಕಾರಿಗಳು ವರ್ಗಾಯಿಸುವುದು.

ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಂದ ಮಾಹಿತಿ ಹಕ್ಕು ಅಧಿನಿಯಮದ ಅಡಿ ಅರ್ಜಿಗಳ ವಿಲೇವಾರಿ ಕುರಿತು ಮಾಹಿತಿಯನ್ನು ನಿಗಧಿತ ನಮೂನೆ-1, ನಮೂನೆ-2, ನಮೂನೆ-3 ಮತ್ತು ನಮೂನೆ-4 ರಲ್ಲಿ ಪಡೆದು ಮಾಸಿಕ/ತ್ರೈಮಾಸಿಕ/ವಾರ್ಷಿಕ ವರದಿಯನ್ನು ಕ್ರೋಢೀಕರಿಸಿ, ವರದಿಯನ್ನು ಸರ್ಕಾರಕ್ಕೆ/ರಾಜ್ಯ ಮಾಹಿತಿ ಆಯೋಗಕ್ಕೆ ಸಲ್ಲಿಸುವಲ್ಲಿ ಇಲಾಖೆಯ ಆಯುಕ್ತರಿಗೆ ನೆರವು ನೀಡುವುದು.

ಕಲಂ 19(1) ರನ್ವಯ ಮೇಲ್ಮನವಿಗಳನ್ನು ಸಂಬಂಧಿಸಿದ ಮೇಲ್ಮನವಿ ಪ್ರಾಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ ಸಲ್ಲಿಸುವುದು.

**ಜಿಲ್ಲಾ ಮಟ್ಟದಲ್ಲಿ**

| | | |
|---|---|---|
| 1 | ಆಯಾ ಜಿಲ್ಲೆಯ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | ಸಾರ್ವಜನಿಕ ಮಾಹಿತಿ ಅಧಿಕಾರಿಗಳು |
| 2 | ಕಛೇರಿ ಅಧೀಕ್ಷಕರು, ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ | ಸಹಾಯಕ ಮಾಹಿತಿ ಅಧಿಕಾರಿಗಳು |
| 3 | ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಕ ಅಧಿಕಾರಿಗಳು | ಮೊದಲನೇ ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆ |

**ತಾಲ್ಲೂಕು ಮಟ್ಟದಲ್ಲಿ**

| | | |
|---|---|---|
| 1 | ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಗ್ರೇಡ್- 1&2 | ಸಾರ್ವಜನಿಕ ಮಾಹಿತಿ ಅಧಿಕಾರಿಗಳು |
| 2 | ಆಯಾ ಜಿಲ್ಲೆಯ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | ಮೊದಲನೇ ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆ |

ಜಿಲ್ಲಾ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಅಧಿಕಾರಿಗಳು 2005 ರ ಮಾಹಿತಿ ಹಕ್ಕು ಕಾಯಿದೆ ಕಲಂ 6 ಮತ್ತು 7ರಡಿ ಸಾರ್ವಜನಿಕ ಮಾಹಿತ ಅಧಿಕಾರಿಗಳಾಗಿರುತ್ತಾರೆ. ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕಾಲಂ 19 (1) ರನ್ವಯ ಮೇಲ್ಮನವಿ ಪ್ರಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು. ತಾಲ್ಲೂಕು ಮಟ್ಟದ ಮಾಹಿತಿ ಅಧಿಕಾರಿ ಕಳುಹಿಸುವ ಮಾಹಿತಿಯನ್ನು ಆದರಿಸಿ, ಮಾಸಿಕ, ತ್ರೈಮಾಸಿಕ ಹಾಗೂ ವಾರ್ಷಿಕ ವರದಿಗಳನ್ನು ತಯಾರಿಸಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಮತ್ತು ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗಕ್ಕೆ ನಿಗಧಿತ ಸಮಯದಲ್ಲಿ ಸಲ್ಲಿಸತಕ್ಕದ್ದು. ತಾಲ್ಲೂಕು ಸಹಾಯಕ ನಿರ್ದೇಶಕರು, ಗ್ರೇಡ್– 1&2 ಸಮಾಜ ಕಲ್ಯಾಣ ಅಧಿಕಾರಿಯ ತಾಲ್ಲೂಕಿನ ವ್ಯಾಪ್ತಿಯಲ್ಲಿ 6 ಮತ್ತು 7 ರಡಿ ಸ್ವೀಕೃತವಾಗುವ ಅರ್ಜಿಗಳನ್ನು ವಿಲೆ ಮಾಡುವುದಲ್ಲದೆ, ಅರ್ಜಿಗಳ ವಿಲೇವಾರಿ ಕುರಿತು ಮಾಹಿತಿಯನ್ನು ನಿಗಧಿತ ನಮೂನೆ 1, 2, 3 ಮತ್ತು 4 ರಲ್ಲಿ ಮಾಸಿಕ, ತ್ರೈಮಾಸಿಕ ಮತ್ತು ವಾರ್ಷಿಕ ವರದಿಗಳನ್ನು ಜಿಲ್ಲಾ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು ಸಮಾಜ ಕಲ್ಯಾಣ ಅಧಿಕಾರಿಯವರ ಕಛೇರಿಗೆ ಕಾಲಕಾಲಕ್ಕೆ ಸಲ್ಲಿಸುವ ಜವಾಬ್ದಾರಿಯನ್ನು ಸಹ ಹೊಂದಿರುತ್ತಾರೆ.

(ಎಂ.ವಿ. ಸಾವಿತ್ರಿ, ಭಾ.ಆ.ಸೇ.)
ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

<u>ಪ್ರತಿಯನ್ನು:-</u>

1) ಮುಖ್ಯ ಆಯುಕ್ತರು, ಕರ್ನಾಟಕ ಮಾಹಿತಿ ಹಕ್ಕು ಆಯೋಗ, ವಿಕಾಸ ಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ಆಯುಕ್ತರ ಕಛೇರಿ, ಸಮಾಜ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ
4) ಎಲ್ಲಾ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಮುಂದಿನ ಕ್ರಮಕ್ಕಾಗಿ
5) ಎಲ್ಲಾ ಜಿಲ್ಲೆಯ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಮಾಹಿತಿಗಾಗಿ.
6) ಎಲ್ಲಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರು, ಗ್ರೇಡ್– 1&2 ಸಮಾಜ ಕಲ್ಯಾಣ ಇಲಾಖೆ
7) ಕಛೇರಿ ಪ್ರತಿ